ದಿನಾಂಕಃ **27.02.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಡಿ.ಟಿ. ವಕೀಲರಿಂದಃ

ಗರಣಿ ಗ್ರಾಮದ ಸರ್ವೆ.ನಂ.571 ಕ್ಕೆ ಸಂಬಂಧಿಸಿದಂತೆ ಪೋಡಿಗಳು ಆಗಿರುತ್ತವೆ ಎಂದರೆ ಸರಿ. ಸರ್ವೆ.ನಂ.571 ಮೂಲತಃ ಸಿದ್ದರಾಮಯ್ಯರವರಿಗೆ ಸೇರಿತ್ತು ಎಂದರೆ ಸರಿ. ಸರ್ವೆ.ನಂ.571 ರ ಒಟ್ಟು ವಿಸ್ತೀರ್ಣ 1 ಎಕರೆ 13 ಗುಂಟೆ ಎಂದರೆ ಸರಿ. ಸದರಿ 1 ಎಕರೆ 13 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ನನಗೆ ಯಾವುದೇ ನೊಂದಣಿ ದಾಖಲೆ ಬರೆದುಕೊಟ್ಟಿರುದಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ನಿಪಿ-13 ರಲ್ಲಿನ ಜಮೀನ ಸರ್ವೆ.ನಂ., ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ಓದಿ ಹೇಳಿ ಸದರಿ ಜಮೀನಿನಲ್ಲಿ ನಿಮಗೆ ಯಾವುದಾದರು ಹಕ್ಕು ಇರುತ್ತದೆಯೇ ಎಂದು ಕೇಳಲಾಗಿ ಸಾಕ್ಷಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

2. ವಾದಿ ಸಿದ್ದರಾಮಯ್ಯರವರಿಂದ ಖರೀದಿ ಮಾಡಿದ 5 ಗುಂಟೆ ಜಮೀನಿಗೆ ಹೊಂದುಕೊಂಡು ಕರಾಬು ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ 1 ಗುಂಟೆ ಕರಾಬು ಇರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅದನ್ನೇ ನನಗೆ ಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ಯಾರು ನಿಮಗೆ ಸದರಿ 1 ಗುಂಟೆ ಕರಾಬನ್ನು ಕೊಟ್ಟಿರುತ್ತಾರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನ್ನ ತಮ್ಮ ಸಿದ್ದರಾಮಯ್ಯ 1 ಗುಂಟೆ ಕರಾಬು ಮತ್ತು 4 ಗುಂಟೆ ಜಮೀನನ್ನು ನನಗೆ ಮೊದಲೇ ಬಿಟ್ಟುರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ತಮ್ಮ ನನಗೆ 1 ಗುಂಟೆ ಕರಾಬು ಮತ್ತು 4 ಗುಂಟೆ ಜಮೀನನ್ನು ಬಿಟ್ಟಿರುವುದಕ್ಕೆ ಲಿಖಿತ ದಾಖಲೆ ಇರುತ್ತದೆ. ಸದರಿ ದಾಖಲೆ ನೊಂದಣಿಯಾಗಿರುವುದಿಲ್ಲ. ಸದರಿ ದಾಖಲೆ 1984 ರಲ್ಲಿ ಆಗಿರುತ್ತದೆ. ಸದರಿ ದಾಖಲೆ ಮೇರೆಗೆ ನನ್ನ ಹೆಸರಿಗೆ ಮ್ಯುಟೇಷನ್ ಆದೇಶವಾಗಿರುವುದಿಲ್ಲ.

3. ವಾದಿ ಖರೀದಿ ಮಾಡಿದ 5 ಗುಂಟೆ ಜಮೀನಿನಲ್ಲಿ 2 ಗುಂಟೆ ಜಮೀನನ್ನು ಕಾವಲಪ್ಪ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ 2 ಗುಂಟೆ ಜಮೀನು ಹಿಡುವಳಿ ಜಮೀನು ಎಂದರೆ ಸರಿ. ಸರ್ವೆ.ನಂ.571 ನ್ನು ಪೋಡಿ ಮಾಡಿದಾಗ ಸರ್ವೆ.ನಂ.571/3 ಡಿರಲ್ಲಿನ ಕರಾಬು ಜಮೀನನ್ನು ವಾದಿ ಹೆಸರಿಗೆ ತೋರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನಿಪಿ-1 ರಲ್ಲಿ ನನ್ನ ಹೆಸರಿನ ಮುಂದೆ ತೋರಿಸಿರುವಂತಹ ಜಮೀನು ಸಂಪೂರ್ಣವಾಗಿ ಹಿಡುವಳಿ ಜಮೀನು ಆಗಿರುತ್ತದೆ ಎಂದರೆ ಸರಿ. ಸರ್ವೆ.ನಂ.571/3 ಡಿರಲ್ಲಿನ ಕರಾಬು ಜಮೀನು ನನಗೆ ಸೇರಿರುತ್ತದೆ ಎಂಬುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ.

4. ವಾದಿ ಹೆಸರಿಗೆ ವರ್ಗಾವಣೆಯಾಗಿದ್ದಂತಹ ಕಂದಾಯ ದಾಖಲೆಗಳನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿದ್ದೇನು ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ಒಂದು ಆದೇಶದ ಪ್ರತಿಯನ್ನು ತೋರಿಸಿ ನಾನು ಸಲ್ಲಿಸಿದ್ದಂತಹ ಮೇಲ್ಮನವಿಗೆ ಸಂಬಂಧಿಸಿದ ಆದೇಶ ಎಂದು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದರಿಂದ ಅದನ್ನು ನಿಪಿ-31 ಎಂದು ಗುರುತಿಸಲಾಯಿತು. ನನ್ನ ಜಮೀನಿನ ಉತ್ತರಕ್ಕೆ ವಾದಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ವಾದಿ ಗ್ರಾಮ ಠಾಣಾ ರಸ್ತೆಯಿಂದ ಅವರ ಜಮೀನಿಗೆ ಹೋಗಲು ರಸ್ತೆಯ ಹಕ್ಕನ್ನು ಕೋರಿ ಓ.ಎಸ್.320/1996 ರಂತೆ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಓ.ಎಸ್.320/1996 ರ ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್.ಎಸ್.ಎ 198/2020 ರಂತೆ ಮೇಲ್ಮನವಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

5. 1996 ರಿಂದ ವಾದಿ ಖರೀದಿ ಮಾಡಿದ ಜಮೀನಿಗೆ ಸಂಬಂಧಿಸಿದಂತೆ ನನ್ನ ಮತ್ತು ವಾದಿಯ ಮಧ್ಯೆ ದಾರಿ ವಿಚಾರವಾಗಿ ವ್ಯಾಜ್ಯ ನಡೆಯುತ್ತಿರುತ್ತದೆ ಎಂದರೆ ಸರಿ. ದಾವಾ ಸ್ವತ್ತನ್ನು ವಾದಿ ನನಗೆ ಮಾರಾಟ ಮಾಡುತ್ತೇನೆಂದು ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದು

ನಾನು ವಾದಿಯ ವಿರುದ್ಧ ಓ.ಎಸ್.137/2015 ರಂತೆ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ವಾದಿ ಖರೀದಿ ಮಾಡಿರುವ ಜಮೀನನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ನಾನು ಸತತವಾಗಿ ಪ್ರಯತ್ನಿಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ದಾವಾ ಸ್ವತ್ತಿನ ಸರ್ವೆ.ನಂ. ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ಓದಿ ಹೇಳಿ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನಿಮಗೆ ಯಾವುದಾದರು ಹಕ್ಕು ಇರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನಗೆ ಮಾರಾಟ ಮಾಡಲು ಒಪ್ಪಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಅದನ್ನು ಹೊರತುಪಡಿಸಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಕರಾರು ಪತ್ರದಲ್ಲಿ ದಾವಾ ಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಟ್ಟಿರುವುದಿಲ್ಲ ಆದ್ದರಿಂದ ಇಂದಿಗೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ವಾದಿ ಇರುತ್ತಾರೆ ಎಂದರೆ ಸರಿ.

6. ದಾವಾ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಮತ್ತು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ